ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ದಿನಾಂಕ ೩೦ನೇ ಶುಕ್ರವಾರ ಆಗಸ್ಟ್ ೧೯೮೩, ಭಾದ್ರಪದ ೮, ಶಕ ೧೯೦೭.

ಸದನವು ಬೆಳಿಗ್ಗೆ ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ೧೦ಗಂಟೆಗೆ ಸಮಾವೇಶಗೊಂಡಿತು

[ಮಾನ್ಯ ಉಪಾಧ್ಯಕ್ಷರು (ಶ್ರೀ ಲಕ್ಷ್ಮೀನರಸಿಂಹಯ್ಯ) ಪೀಠವನ್ನು ಅಲಂಕರಿಸಿದ್ದರು.]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಪ್ರಶ್ನೆ ಸಂಖ್ಯೆ ೧೨೫೧ ಸದಸ್ಯರು ಗೈರು ಹಾಜರು. ಪ್ರಶ್ನೆ ಸಂಖ್ಯೆ ೧೨೨೧

ಉಪಾಧ್ಯಕ್ಷರು -- ಮಾನ್ಯ ಸದಸ್ಯರಾದ ವೇದಾಂತ ಹೆಮ್ಮಿಗೆಯವರ ಪ್ರಶ್ನೆಗೆ ಉತ್ತರ ಬರದೇ ಇರುವುದರಿಂದ ಕ್ಯಾರಿ ಓವರ್ ಮಾಡಲಾಗಿದೆ.

ಪ್ರಶ್ನೆ ಸಂಖ್ಯೆ ೧೨೪೫ ಸದಸ್ಯರು ಗೈರು ಹಾಜರು.

ಪ್ರಶ್ನೆ ಸಂಖ್ಯೆ ೯೬೯ ಸದಸ್ಯರು ಗೈರು ಹಾಜರು.

ಪ್ರಶ್ನೆ ಸಂಖ್ಯೆ ೧೨೪೮

ಶ್ರೀ ಎಸ್. ಆರ್. ಬೊಮ್ಮಾಯಿ.--ಅಧ್ಯಕ್ಷರೇ, ಇದನ್ನು ಕ್ಯಾರಿ ಓವರ್ ಮಾಡಬೇಕು.

ಉಪಾಧ್ಯಕ್ಷರು.-- ಕ್ಯಾರಿ ಓವರ್ ಮಾಡಲಾಗಿದೆ.

ಸರ್ಕಾರಿ ಗೋಮಾಳವನ್ನು ಅಕ್ರಮವಾಗಿ ಉಳುಮೆ ಮಾಡುತ್ತಿರುವ ಬಗ್ಗೆ

೧೨೨೨. ಶ್ರೀ ಪಿ.ಬಿ. ಓಂಕಾರ ಮೂರ್ತಿ (ಕಡೂರು).— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ರಾಜ್ಯದಲ್ಲಿ ಸರ್ಕಾರಿ ಗೋಮಾಳವನ್ನು ಅಕ್ರಮವಾಗಿ ಉಳುಮೆ ಮಾಡುತ್ತಿರುವುದರಿಂದ, ಗೋಮಾಳಗಳೇ ಇಲ್ಲವಾಗುತ್ತಿರುವುದರಿಂದ, ಜಾನುವಾರುಗಳಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ, ಈ ರೀತಿ ಬಗರ್ ಹುಕ್ಕುಂ ಸಾಗುವಳಿ ಮಾಡುತ್ತಿರುವರ ಬಗ್ಗೆ ಸರ್ಕಾರವು ಯಾವ ಕ್ರಮ ತೆಗೆದುಕೊಂಡಿದೆ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು),—

ಅ) ಸರ್ಕಾರಿ ಗೋಮಾಳವನ್ನು ಅಕ್ರಮವಾಗಿ ಉಳುಮೆ ಮಾಡುತ್ತಿರುವುದರಿಂದ, ಗೋಮಾಳಗಳು ಇಲ್ಲವಾಗುತ್ತಿರುವುದು ಹಾಗೂ ಜಾನುವಾರುಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಎಲ್ಲಿ ನಿಗದಿತ ಮಿತಿಗಿಂತ ಕಡಿಮೆ ಇರುವಂತಹ ಗೋಮಾಳವನ್ನು ಮಂಜೂರಿ ಮಾಡುವ ಪ್ರಕರಣಗಳನ್ನು ಸರ್ಕಾರಕ್ಕೆ ಕಳುಹಿಸುವಂತೆ ನಿಯಮ ೯೭(೪)ಕ್ಕೆ ಸೂಕ್ತ ತಿದ್ದುಪಡಿಯನ್ನು ಮಾಡಲಾಗಿರುತ್ತದೆ.

ಹಾಗೂ ಎಲ್ಲಾ ಕಂದಾಯ ಅಧಿಕಾರಿಗಳಿಗೆ ಕರ್ನಾಟಕ ಭೂ ಕಂದಾಯ ನಿಯಮಗಳು, ೧೯೬೯ರ ನಿಯಮ ೬೭(೧)ರ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸಲು, ಆದೇಶ ನೀಡಲಾಗಿದೆ.

ಶ್ರೀ ಪಿ.ಬಿ. ಓಂಕಾರಮೂರ್ತಿ.— ಕಡೂರು ತಾಲ್ಲೂಕು ಉದಾಹರಣೆಗೆ ತೆಗೆದುಕೊಂಡರೆ ಪ್ರತಿ ಗ್ರಾಮದಲ್ಲೂ ಸಾಕಷ್ಟು ಗೋಮಾಳ ಇದ್ದರೂ ಬಗರ್ ಹುಕುಂನಿಂದ ಭೂಮಿ ಹೆಚ್ಚುವರಿ ಇರತಕ್ಕವರೇ ಉಳುಮೆ ಮಾಡುತ್ತಿದ್ದಾರೆ. ಈವರೆಗೆ ಅವರ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಅವರಿಂದ ಖುಲ್ಲಾ ಪಡಿಸಿ ಆ ಗ್ರಾಮಕ್ಕೆ ಗೋಮಾಳ ರಿಸರ್ವ ಇಡುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್ ಆರ್. ಬೊಮ್ಮಾಯಿ. — ಕಾನೂನು ಪ್ರಕಾರ ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ಗೋಮಾಳ ಇರಲೇಬೇಕು. ಕಾನೂನು ಮೀರಿ ಯಾರಾದರೂ ಜಮೀನನ್ನು ಅತಿಕ್ರಮಣ ಮಾಡಿದ್ದರೆ ಅವರ ಮೇಲೆ ಕ್ರಮ ಕೈಗೊಳ್ಳಲಿಕ್ಕೆ ಅಧಿಕಾರಿಗಳಿಗೆ ಸೂಕ್ತ ಆದೇಶ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಯಾವ ಪ್ರಕರಣಗಳಲ್ಲಿ ಆಗಿದೆ ಎನ್ನುವುದನ್ನು ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇದರಲ್ಲಿ ಎರಡು ತರಹ ಸಮಸ್ಯೆ ಇದೆ, ಸುಮಾರು ನೂರಾರು ಜಾನುವಾರುಗಳು ಇರುವ ಕಡೆ ೩೦ ಎಕರೆ ಜಮೀನು ಗೋಮಾಳಕ್ಕೆ ಇಡಬೇಕೆಂದು ನಿಯಮ ಇದೆ. ಅಲ್ಲದೇ ಅನೇಕ ಆಜ್ಞೆಗಳನ್ನು ಸರ್ಕಾರದಿಂದ ಹೊರಡಿಸಿದ್ದೀರಿ. ಮೂರು ನಾಲ್ಕು ವರ್ಷಗಳಿಂದ ಅನ್ ಅಥರೈಸ್ಡ್ ಕಲ್ಟಿವೇಷನ್ ಮಾಡಿಕೊಂಡು ಬಂದಿದ್ದರೆ ರೆಗ್ಯುಲರೈಸ್ ಮಾಡಬೇಕೆಂದು ಆಜ್ಞೆಗಳು ಇವೆ, ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಮಾಡಬೇಕಾಗುತ್ತದೆ. ಉದಾಹರಣೆಗೆ ಹೇಳಬೇಕೆಂದರೆ ಬೀದರ್ ಜಿಲ್ಲೆಯಲ್ಲಿ ೨೦-೨೫ ವರ್ಷದಿಂದ ಸುಮಾರು ಸಾವಿರಾರು ಎಕರೆ ಜಮೀನು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಇಷ್ಟು ಕ್ಯಾಟಲ್‌ಗೋಸ್ಕರ ಇಷ್ಟು ಎಕರೆ ಜಮೀನು ಇಡಬೇಕೆಂದು ಒಂದು ತಕರಾರು ಆಗಿ ಅದು ಅಲ್ಲಿಗೆ ನಿಂತಿದೆ. ಒಂದು ಕಡೆ ರೆಗ್ಯುಲರೈಸ್ ಮಾಡಬೇಕೆಂದು ಆರ್ಡರ್ ಇದೆ, ಮತ್ತೊಂದು ಕಡೆ ಇಷ್ಟು ಕ್ಯಾಟಲ್ಸ್ ಇದ್ದರೆ ಇಷ್ಟು ಜಮೀನು ರಿಸರ್ವ್ ಇಡಬೇಕೆಂದು ಇದೆ. ಇದರಿಂದ ಒಂದು ಬಹಳ ದೊಡ್ಡ ಸಮಸ್ಯೆಯಾಗಿದೆ. ಈಗ ಅಲ್ಲಿ ಸುಮಾರು ೨೦-೨೫ ವರ್ಷದಿಂದ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ, ಇದನ್ನು ಹೇಗೆ ಬಗೆಹರಿಸುತ್ತೀರಾ? ಮಾನ್ಯ ಸದಸ್ಯರ ಪ್ರಶ್ನೆ ಏನಿದೆ, ದನ ಕರುಗಳಿಗೆ ಮೇಯುವುದಕ್ಕೆ ಜಾಗ ಇಲ್ಲ ಗೋಮಾಳ ಮಾಡಿಕೊಡಬೇಕೆಂದು ಕೇಳಿದ್ದಾರೆ. ಕೆಲವು ಕಡೆ ೧೫-೨೦ ವರ್ಷದಿಂದ ಸತತವಾಗಿ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಈ ಪ್ರಾಬ್ಲಮ್ ಯಾವ ರೀತಿ ಬಗೆಹರಿಸುತ್ತೀರಿ?

ಶ್ರೀ ಎಸ್.ಆರ್. ಬೊಮ್ಮಾಯಿ.— ಮಾನ್ಯ ಸದಸ್ಯರು ಹೇಳಿದಂತೆ ಅನೇಕ ಕಡೆಗಳಲ್ಲಿ ಇಂಥ ಪ್ರಕರಣಗಳು ಆಗಿವೆ. ಸರ್ಕಾರ ಗೋಮಾಳ ಉಳಿಸಿಕೊಳ್ಳುವ ಬಗ್ಗೆ ಕ್ರಮ ಕೈಗೊಳ್ಳುತ್ತದೆ. ಹಾಗೆಯೇ ಮಾನವೀಯತೆ ದೃಷ್ಟಿಯಿಂದ ೨೦ ವರ್ಷದಿಂದ ಸಾಗುವಳಿ ಮಾಡಿದ ರೈತರ ಹಿತವನ್ನು ರಕ್ಷಣೆ ಮಾಡುವ ಪ್ರಯತ್ನ ಮಾಡುತ್ತೇವೆ. ಎರಡರ ಬಗ್ಗೆಯೂ ಗಮನದಲ್ಲಿಟ್ಟು ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಕೊಡಗು ಜಿಲ್ಲೆ ಜಮೀನುಗಳ ರೀ-ಸರ್ವೆ ಬಗ್ಗೆ

೧೦೬೫. ಶ್ರೀ ಡಿ. ಚಿನ್ನಪ್ಪ (ಮಡಿಕೇರಿ).— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಕೊಡಗು ಜಿಲ್ಲೆಯಲ್ಲಿ ರೀ-ಸರ್ವೆ ತೆಗೆದುಕೊಂಡಿರುವುದು ನಿಜವೇ ;

ಆ) ಹಾಗಾದರೆ ಯಾವಾಗ ಪ್ರಾರಂಭವಾಯಿತು,

ಇ) ರೀ-ಸರ್ವೆ ಪೂರ್ಣಗೊಂಡಿರುವ ಗ್ರಾಮಗಳ ಸಂಖ್ಯೆ,

ಈ) ಪೂರ್ಣಗೊಂಡ ಗ್ರಾಮಗಳ ಹಕ್ಕು ದಾಖಲೆಗಳನ್ನು ಪ್ಲಾನ್‌ಗಳೊಂದಿಗೆ ನಂಬಬಹುದಾದ ದಾಖಲೆಗಳೆಂದು ತಯಾರಿಸಲಾಗಿದೆಯೇ?

ಉ) ದಿನಾಂಕ ೧-೪-೮೫ರವರೆಗೆ ತೆಗುಲಿರುವ ವೆಚ್ಚ ಮತ್ತು ಎಕರೆಯೊಂದರ ರೀ-ಸರ್ವೆಯ ಸರಾಸರಿ ಖರ್ಚು,